ದಿನಾಂಕಃ **15.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ವಿ.ಎಸ್.ಕೆ. ವಕೀಲರಿಂದಃ

ವಾದಿ ನನ್ನ ಅಣ್ಣ ಎಂದರೆ ಸರಿ. ಟಿ.ವೆಂಕಟರೆಡ್ಡಿ ನನ್ನ ದೊಡ್ಡಪ್ಪ. ದಾವಾ ಸ್ವತ್ತು ನನ್ನ ದೊಡ್ಡಪ್ಪ ಟಿ.ವೆಂಕಟರೆಡ್ಡಿ ರವರಿಗೆ ಸೇರಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ಮತ್ತು ದೊಡ್ಡಪ್ಪ ವಿಭಾಗ ಮಾಡಿಕೊಂಡಾಗ ದಾವಾ ಸ್ವತ್ತು ನನ್ನ ದೊಡ್ಡಪ್ಪ ಟಿ.ವೆಂಕಟರೆಡ್ಡಿರವರ ಪಾಲಿಗೆ ಹೋಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಟಿ.ವೆಂಕಟರೆಡ್ಡಿರವರಿಗೆ ತಿಮ್ಮಕ್ಕ ಮತ್ತು ನಾಗಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಟಿ.ವೆಂಕಟರೆಡ್ಡಿರವರಿಗೆ ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಟಿ.ವೆಂಕಟರೆಡ್ಡಿರವರಿಗೆ ಗಂಡು ಮಕ್ಕಳು ಇಲ್ಲದ ಕಾರಣ ವಾದಿಯನ್ನು ಸಾಕಿಕೊಂಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯನ್ನು ಟಿ.ವೆಂಕಟರೆಡ್ಡಿ ದತ್ತು ಪಡೆದುಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಟಿ.ವೆಂಕಟರೆಡ್ಡಿಯ ಇಬ್ಬರು ಹೆಣ್ಣು ಮಕ್ಕಳು ಅವರ ಗಂಡಂದಿರ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

2. ಟಿ.ವೆಂಕಟರೆಡ್ಡಿರವರ ಯೋಗ ಕ್ಷೇಮವನ್ನು ವಾದಿ ನೋಡಿಕೊಂಡಿರುತ್ತಾರೆ ಎಂದರೆ ಸರಿ. ಟಿ.ವೆಂಕಟರೆಡ್ಡಿರವರು 1983 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಟಿ.ವೆಂಕಟರೆಡ್ಡಿರವರ ಅಂತ್ಯಕ್ರಿಯೆಗಳನ್ನು ವಾದಿಯೇ ಮಾಡಿರುತ್ತಾರೆ ಎಂದರೆ ಸರಿ. ಟಿ.ವೆಂಕಟರೆಡ್ಡಿರವರ ತೀರಿಕೊಂಡ ನಂತರ ಅವರ ಮಗಳು ನಾಗಮ್ಮ ವಾದಿ ಮತ್ತು

ತಿಮ್ಮಕ್ಕರವರ ವಿರುದ್ಧ ಓ.ಎಸ್.ನಂ.68/1983 ರಂತೆ ದಾವೆಯನ್ನು ಹೂಡಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಆಗ ನನಗೆ ಗೊತ್ತಿರಲಿಲ್ಲ, ಈ ದಾವೆಯನ್ನು ಹೂಡಿದ ನಂತರ ಸದರಿ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ಆದಂತಹ ರಾಜಿಯಲ್ಲಿ ದಾವಾ ಸ್ವತ್ತು ಈ ದಾವೆಯ ವಾದಿಯ ಪಾಲಿಗೆ ಬಂದಿರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಸದರಿ ಸ್ವತ್ತು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಹಳೆ ನಂ.74 ಇದ್ದು ನಂತರ ಅದಕ್ಕೆ 71 ಎಂದು ಹೊಸ ನಂಬರ್ ನೀಡಿದ್ದರು ತದನಂತರ ಖಾತೆ ನಂ.77 ನೀಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

3. ಓ.ಎಸ್.ನಂ.68/1983 ರಲ್ಲಿ ಆದಂತಹ ರಾಜಿಯಲ್ಲಿ ದಾವಾ ಸ್ವತ್ತು ವಾದಿಯ ಪಾಲಿಗೆ ಬಂದಿರುತ್ತದೆ ಎಂದು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಪ್ರತಿವಾದಿಯ ಒಪ್ಪಿಗೆಯ ಮೇರೆಗೆ ದಾವಾ ಸ್ವತ್ತಿನಲ್ಲಿ ವಾಸಿಸಲು ಪ್ರಾರಂಭಿಸಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಇದ್ದರು ಅವರ ನಂತರ ನಾನು ಇರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು ಪ್ರತಿವಾದಿಯಿಂದ ಒಂದು ವರ್ಷದ ಅವಧಿಗೆ ದಾವಾ ಸ್ವತ್ತಿನಲ್ಲಿ ವಾಸ ಇರಲು ಅನುಮತಿ ಪಡೆದುಕೊಂಡು ದಾವಾ ಸ್ವತ್ತಿನ ಸ್ವಾಧೀನಕ್ಕೆ ಬಂದಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ದಿಃ18.04.2011 ರಂದು ದಾವಾ ಸ್ವತ್ತನ್ನು ಖಾಲಿ ಮಾಡುವಂತೆ ವಾದಿ ನನಗೆ ನೋಟಿಸ್ಸು ಕೊಡಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದಕ್ಕೆ ನಾನು ಉತ್ತರ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ.

4. ದಿಃ18.04.2011 ರಂತೆ ವಾದಿ ನನಗೆ ನೋಟಿಸ್ಸು ಕೊಡಿಸಿದ ನಂತರ ನಾನು 2011 ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಿ ದಾವಾ ಸ್ವತ್ತಿನ್ನು ಖಾಲಿ ಮಾಡಿ ಸ್ವಾಧೀನವನ್ನು ವಾದಿಗೆ ನೀಡಿ ಎರಡು ದಿನಗಳ ನಂತರ ಪುನಃ ಅಕ್ರಮವಾಗಿ ನಾನು ದಾವಾ ಸ್ವತ್ತಿನ ಸ್ವಾಧೀನಕ್ಕೆ ಬಂದಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಅಕ್ರಮವಾಗಿ ಸೇರಿಕೊಂಡಿರುತ್ತೇನೆ ಎಂದು ಪೊಲೀಸರಿಗೆ ದೂರನ್ನು ಸಲ್ಲಿಸಿದ್ದರು ಎಂದು ಸೂಚಿಸುವುದು ಸರಿಯಲ್ಲ.

5. ಓ.ಎಸ್.ನಂ.319/1977 ರಲ್ಲಿ ಈ ದಾವೆಯ ವಾದಿ ಪಕ್ಷಗಾರನಾಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯರಾಗಿರುವುದಿಲ್ಲ. ಓ.ಎಸ್.ನಂ.319/1977 ರಲ್ಲಿನ ದಾವಾ ಸ್ವತ್ತಿನ ಸ್ವತ್ತಿನ ಸಂಖ್ಯೆ ಸೈಟ್ ನಂ.64 ಆದರೆ ಖಾತೆ ನಂಬರ್ ಹೇಳಲು ಆಗುವುದಿಲ್ಲ. ಓ.ಎಸ್.ನಂ.319/1977 ರಲ್ಲಿನ ದಾವಾ ಸ್ವತ್ತು ಮತ್ತು ಈ ದಾವೆಯ ದಾವಾ ಸ್ವತ್ತು ಬೇರೆ ಬೇರೆ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತು ನನ್ನ ಮಾಲಿಕತ್ವಕ್ಕೆ ಸೇರಿರುತ್ತದೆ. ದಾವಾ ಸ್ವತ್ತು ನನ್ನ ಮಾಲಿಕತ್ವಕ್ಕೆ ಸೇರಿರುತ್ತದೆ ಎಂದು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6. ದಾವಾ ಸ್ವತ್ತಿನ ಖಾತೆ ಹಿಂದೆ ಯಾರ ಹೆಸರಿನಲ್ಲಿ ಇತ್ತು ಈಗ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ಖಾತೆ ನಿಮ್ಮ ಹೆಸರಿನಲ್ಲಿ ಅಥವಾ ನಿಮ್ಮ ತಂದೆಯ ಹೆಸರಿನಲ್ಲಿ ಇತ್ತೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಅದನ್ನು ನಾನು ನೋಡಬೇಕಾಗಿರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಗೆ ಬಿಟ್ಟುಕೊಡಬೇಕಾಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ದಾವಾ ಸ್ವತ್ತು ನಮಗೆ

ಸೇರಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ